ಏಪ್ರಿಲ್ 17, 2004

**ಭಾರತೀಯ ರಿಸರ್ವ್ ಬ್ಯಾಂಕ್, ಅನಿವಾಸಿ ಠೇವಣಿ ಯೋಜನೆಗಳನ್ನು ಸುವ್ಯವಸ್ಥೆಗೊಳಿಸುತ್ತದೆ**

ಈಗಿರುವ ಅನಿವಾಸಿ ಠೇವಣಿ ಯೋಜನೆಗಳನ್ನು, ಪುನರಾವಲೋಕನ ಮಾಡಿದ ಮೇಲೆ, ತಕ್ಷಣದಿಂದ ಜಾರಿಗೆ ಬರುವಂತೆ, ಈ ಕೆಳಕಂಡ ಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದೆ.

**( i ) ಅನಿವಾಸಿ ಅವಧಿ ಠೇವಣಿಗಳ ಬಡ್ಡಿದರದ ಮೇಲೆ ಗರಿಷ್ಠ ಪರಿಮಿತಿ**

ಮುಂದಿನ ನೋಟೀಸು ನೀಡುವವರೆಗೆ, ಒಂದರಿಂದ ಮೂರು ವರ್ಷಗಳವರೆಗೆ ಅನಿವಾಸಿ (ವಿದೇಶಿ) ರೂಪಾಯಿ (ಎನ್ ಆರ್ ಇ) ಠೇವಣಿಗಳ ಮೇಲೆ ಬಡ್ಡಿದರಗಳು, 17ನೇ ಏಪ್ರಿಲ್ 2004 ರಂದು ಭಾರತದಲ್ಲಿ ಒಪ್ಪಂದ ಮಾಡಿಕೊಳ್ಳಲಾದ ಪರಿಣಾಮಕಾರಿ ವ್ಯವಹಾರದ ಮುಕ್ತಾಯದ, ಸಂಬಂಧಿಸಿದ ಅವಧಿ ತುಂಬಿದ ಯುಎಸ್‌ನ ಎಲ್ಐಬಿಒಆರ್/ಎಸ್‌ಡಬ್ಲ್ಯುಎಪಿ ದರಗಳನ್ನು ಮೀರಕೂಡದೆಂದು ಈಗ ನಿರ್ಧರಿಸಲಾಗಿದೆ.

ಮೂರು ವರ್ಷದ ಠೇವಣಿಗಳಿಗೆ ಮೇಲೆ ನಿರ್ಧರಿಸಲಾದ ಹಾಗೆ ಬಡ್ಡಿಯ ದರ, ಅವಧಿ ತುಂಬಿದ ಅವಧಿಯು ಮೂರು ವರ್ಷಗಳಿಗೆ ಮೀರಿರುವ ಸಂದರ್ಭದಲ್ಲಿಯೂ ಸಹಾ ಅನ್ವಯವಾಗುತ್ತದೆ. ಬಡ್ಡಿ ದರಗಳಲ್ಲಿನ ಬದಲಾವಣೆಗಳು, ಅವುಗಳ ಈಗಿನ ವಾಯಿದೆ ಮುಗಿದಿರುವ ಅವಧಿಯು, ಮುಕ್ತಾಯವಾದ ನಂತರ ನವೀಕರಣ ಮಾಡಿದ ಎನ್ ಆರ್ ಇ ಠೇವಣಿಗಳಿಗೂ ಸಹಾ ಅನ್ವಯವಾಗುತ್ತದೆ.

ಅನಿವಾಸಿ ಭಾರತೀಯರಿಗೆ ನೀಡಲಾದ ಬಡ್ಡಿಯ ದರಗಳಲ್ಲಿ ಸುಸಂಗತತೆಯನ್ನು ಒದಗಿಸುವ ಸಲುವಾಗಿ, ಎನ್ ಆರ್ ಇ ಠೇವಣಿಗಳ ಮೇಲೆ ಬಡ್ಡಿಯನ್ನು 17ನೇ ಜುಲೈ 2003ರಿಂದ ಯುಎಸ್ ಡಾಲರುಗಳಿಗೆ ಸೇರಿಸಲಾಗಿದೆ. ಈ ಠೇವಣಿಗಳ ಮೇಲೆ ಬಡ್ಡಿ ದರಗಳನ್ನು, 17ನೇ ಜುಲೈ 2003ರಂದು ಸಂವಾದಿ ಅವಧಿ ತುಂಬಿದ ಎಲ್ಐಬಿಒಆರ್/ಎಸ್‌ಡಬ್ಲ್ಯುಎಪಿ ದರಗಳ ಮೇಲೆ, 250 ಆಧಾರ ಅಂಶಗಳಿಂದ 15ನೇ ಸೆಪ್ಟೆಂಬರ್ 2003ರಂದು ಸಂವಾದಿ ಅವಧಿ ತುಂಬಿದ ಅವಧಿ ಎಲ್ಐಬಿಒಆರ್/ಎಸ್‌ಡಬ್ಲ್ಯುಎಪಿ ಮೇಲೆ 100 ಆಧಾರ ಅಂಶಗಳಿಗೆ ಇಳಿಸಲಾಗಿದೆ ಮತ್ತು ತರುವಾಯ, 18ನೇ ಅಕ್ಟೋಬರ್ 2003ರಂದು ಸಂವಾದಿ ಅವಧಿ ತುಂಬಿದ ಅವಧಿ ಎಲ್ಐಬಿಒಆರ್/ಎಸ್‌ಡಬ್ಲ್ಯುಎಪಿ ಮೇಲೆ, 25 ಆಧಾರ ಅಂಶಗಳಿಂದ ಇಳಿಸಲಾಗಿದೆ.

**( ii ) ಎನ್‌ಆರ್‌ಇ ಉಳಿತಾಯ ಖಾತೆಗಳ ಮೇಲೆ ಬಡ್ಡಿ ದರ**

ಎನ್‌ಆರ್‌ಇ ಠೇವಣಿಗಳ ವಿವಿಧ ಪ್ರವರ್ಗಗಳ ಮೇಲೆ, ಬಡ್ಡಿ ದರಗಳನ್ನು ಸರಿದೂಗಿಸಿಕೊಳ್ಳುವ ದೃಷ್ಟಿಯಿಂದ, ಎನ್‌ಆರ್‌ಇ ಉಳಿತಾಯ ಠೇವಣಿಗಳ ಮೇಲೆ ಬಡ್ಡಿಯ ದರವನ್ನು, 17ನೇ ಏಪ್ರಿಲ್ 2004ರಂದು ಭಾರತದಲ್ಲಿ ವ್ಯವಹಾರ ಮುಕ್ತಾಯವಾಗುವ ಸಮಯದಿಂದ ಜಾರಿಗೆ ಬರುವಂತೆ, ಎಲ್ಐಬಿಒಆರ್/ಎಸ್‌ಡಬ್ಲ್ಯುಎಪಿಗೆ ಸೇರಿಸಲು ಸಹಾ ನಿರ್ಣಯಿಸಲಾಗಿದೆ. ಎನ್‌ಆರ್‌ಇ ಉಳಿತಾಯ ಠೇವಣಿಗಳ ಮೇಲೆ ಬಡ್ಡಿ ದರಗಳು, ಯುಎಸ್ ಡಾಲರ್ ಠೇವಣಿಗಳ ಮೇಲೆ, ಆರು ತಿಂಗಳು

ಅವಧಿ ತುಂಬಿದ ಎಲ್ಐಬಿಒಆರ್/ಎಸ್ಡಬ್ಲ್ಯುಎಪಿ ದರಗಳನ್ನು ಮೀರಬಾರದು. ಎನ್ಆರ್ಇ ಉಳಿತಾಯ ಠೇವಣಿಗಳ ಬಡ್ಡಿ ದರವನ್ನು, ಹಿಂದಿನ ತ್ರೈಮಾಸಿಕದ ಕೊನೆಯ ಕೆಲಸದ ದಿನದಂದು, ಯುಎಸ್ ಡಾಲರ್‌ನ ಎಲ್ಐಬಿಒಆರ್/ಎಸ್ಡಬ್ಲ್ಯುಎಪಿ ಆಧಾರದ ಮೇಲೆ ತ್ರೈಮಾಸಿಕವಾಗಿ ನಿಗದಿಪಡಿಸಬಹುದು ಏಪ್ರಿಲ್–ಜೂನ್ 2004ರ ತ್ರೈ ಮಾಸಿಕಕ್ಕೆ, ಮಾರ್ಚ್ 2004ರ ಕೊನೆಯ ಕೆಲಸದ ದಿನದಂದು, ಯುಎಸ್ ಡಾಲರ್ ಎಲ್ ಐಬಿಒಆರ್/ಎಸ್ ಡಬ್ಲ್ಯುಎಪಿ ದರಗಳು ಅನ್ವಯವಾಗುತ್ತದೆ.

ಪ್ರಸ್ತುತ, ಎನ್ ಆರ್ ಇ ಉಳಿತಾಯ ಠೇವಣಿಗಳ ಮೇಲೆ, ಬಡ್ಡಿಯ ದರವನ್ನು ದೇಶೀಯ ಉಳಿತಾಯ ಠೇವಣಿಗೆ ಸೇರಿಸಿದ್ದರೆ, 17ನೇ ಜುಲೈ 2003ರಿಂದಲೂ ಎನ್ ಆರ್ ಇ ಅವಧಿ ಠೇವಣಿಗಳ ಮೇಲೆ ಬಡ್ಡಿ ದರಗಳನ್ನು ಯುಎಸ್ ಡಾಲರ್ ಗೆ ಎಲ್ ಐಬಿಒಆರ್/ಎಸ್ ಡಬ್ಲ್ಯುಎಪಿ ದರಗಳಿಗೆ ಸೇರಿಸಲಾಗಿದೆ.

**( iii ) ಎನ್ ಆರ್ ಇ ಉಳಿತಾಯ ಠೇವಣಿಗಳಿಗೆ ಪ್ರತಿಯಾಗಿ ಮುಂಗಡ ಸಾಲ**

ಖಾತೆಯನ್ನು ಹೊಂದಿರುವವರು, ಯಾವುದೇ ಸಮಯದಲ್ಲಿ ಉಳಿತಾಯ ಠೇವಣಿಗಳನ್ನು ತೆಗೆದುಕೊಳ್ಳಬಹುದಾಗಿರುವುದರಿಂದಾಗಿ, ಬ್ಯಾಂಕುಗಳು, ಈ ಠೇವಣಿಗಳ ವಿರುದ್ಧ ಯಾವುದೇ ರೀತಿಯ ಧಾರಣಾಧಿಕಾರ ಗುರುತನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಮಾಡಬಾರದೆಂದು ಸ್ಪಷ್ಟೀಕರಿಸಲಾಗಿದೆ.

ಅಲ್ಪನಾ ಕಿಲ್ಲಾವಾಲಾ
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/1235